# ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಕುಮಟಾ.

**ಸಿ ಸಿ ನಂ. 1013/2023**

ಓಂಕಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿಯಮಿತ, ಕುಮಟಾ

..... ಫಿರ್ಯಾದಿ

ವಿರುದ್ಧ

ರಮೇಶ ರಾಮಚಂದ್ರ ಅಂಬಿಗ ...... ಆರೋಪಿ

ಆರೋಪಿಯ ಹೆಸರು – ರಮೇಶ ರಾಮಚಂದ್ರ ಅಂಬಿಗ

ವಯಸ್ಸು – ವರ್ಷ

ವಾಸ್ತವ್ಯ – ಹೊಸಹಿತ್ತಲ,ದಿವಗಿ, ಕುಮಟಾ

**ದಿನಾಂಕಃ 3.11.2023**

## ಆಪಾದನೆ

ಆರೋಪಿಯಾದ ನೀವು ಪಿರ್ಯಾದಿ ಸಂಸ್ಥೆಯಿಂದ ಪಡೆದ ಸಾಲದ ಹಣದ ಮರುಪಾವತಿಗಾಗಿ ಐಸಿಐಸಿಐ ಬ್ಯಾಂಕ್, ಕುಮಟಾ ಶಾಖೆಯ ಚೆಕ್ ನಂಃ 011906 ನೇದನ್ನು ದಿನಾಂಕಃ 9.5.2023 ರಂದು ರೂ.46,700/– ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಫಿರ್ಯಾದಿ ಸಂಸ್ಥೆಯವರು ಸದ್ರಿ ಚೆಕನ್ನು ನಗಧೀಕರಣಕ್ಕಾಗಿ ತಮ್ಮ ಸಂಸ್ಥೆಯ ಖಾತೆ ಇರುವ ಬ್ಯಾಂಕಗೆ ಹಾಜರುಪಡಿಸಿದಾಗ ಬ್ಯಾಂಕಿನವರು ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ (Funds Insufficient) ಅಂತಾ ಮೇಮೋ ನೀಡಿ ಚೆಕ್‌ನ್ನು ವಾಪಸ್ ಮಾಡಿರುತ್ತಾರೆ. ಈ ಕುರಿತು ಫಿರ್ಯಾದಿಯು ನಿಮಗೆ ತಮ್ಮ ವಕೀಲರ ಮೂಲಕ ತಾಃ 3.6.2023 ರಂದು ರಜಿಸ್ಟರ್ಡ ನೋಟಿಸು ಕೊಟ್ಟಿದ್ದು, ಸದ್ರಿ ನೋಟಿಸನ್ನು ನೀವು ಸ್ವೀಕರಿಸಿಯೂ, ಸದರಿ ನೋಟಿಸಿಗೆ ಉತ್ತರವನ್ನು ನೀಡದೇ, ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡದೇ ನೆಗೋಶಿಯಬಲ್ ಇನಸ್ಟ್ರುಮೆಂಟ್ ಕಾಯಿದೆ ಕಲಂ138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ: 1) ಈಗ ನಿಮಗೆ ಮೇಲೆ ಓದಿ ಹೇಳಿದ ಆರೋಪಣೆ ಕೇಳಿ ತಿಳಿಯಿತೇ?

ಉತ್ತರಃ

ಪ್ರಶ್ನೆ: 2) ನೀವು ಈ ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೇ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಡಂದ್ದಾಗಿದೆಯೆಂದು ನಾನು ಈ ಮೂಲ ದೃಢಿಕರಿಸುತ್ತೇನೆ.

ಸಹಿ

**ಪ್ರಧಾನ ಪ್ರ.ದ.ನ್ಯಾ ದಂಡಾಧಿಕಾರಿ,**

**ಕುಮಟಾ.**